ಹೆಗಲನ್ನೇರಿಸಿಕೊಂಡು ಊರು ತಲುಪಿಸಿದ್ದ.

ಬೆಳಿಗ್ಗೆ ಕೆಲವರು ಗ್ಯಾನಿ ಏನಾದ ಎಂದು ನೋಡಲು ಹೋದರೆ ಗಲ್ಲಗಳು ಕಡುಬಿನಂತೆ ಉಬ್ಬಿಸಿಕೊಂಡ ಗ್ಯಾನಿ ಮಿಷನ್ ಬಳಿ ಮೊಣಕಾಲಿನ ಗಾಯಕ್ಕೆ ಮುತ್ತುತ್ತಿದ್ದ ನೋಣಗಳನ್ನು ಹೊಂಚುಹಾಕಿ ಪಟ್... ಎಂದು ಹೊಡೆಯುತ್ತಾ ಕೂತಿದ್ದ. ಅವನು ಅಲ್ಲಿಗೆ ಬಂದ ಯಾರೊಂದಿಗೂ ಮಾತಾಡದೆ ಇರಲು ತುಳಜಕ್ಕ ತುಕರಾಮಣ್ಣರ ಹೊಡೆತಗಳೇ ಕಾರಣವಾಗಿದ್ದವು. ಅಂದಿನಿಂದ ಇಡೀ ಸ್ಕೂಲಲ್ಲಿ ಗ್ಯಾನಿಯ ಮಾತುಗಳನ್ನು ಕೇಳಲು ಹುಡುಗರು ಗುಂಪು ಸೇರತೊಡಗಿದ್ದರು. ತಾನು ಸೆಲ್ಯೂಟ್ ಹೊಡೆಯಲು ನಿಂತಿದ್ದರಿಂದ ಹಿಡಿದು ತನ್ನ ಮನೆಯಲ್ಲಿ ಆದ ಪೂಜೆಯವರೆಗೆ ರಸವತ್ತಾಗಿ ವರ್ಣಿಸಿ ಎಲ್ಲರಿಗೂ ಹೇಳತೊಡಗಿದ್ದ. ಎಲ್ಲರಲ್ಲೂ ಸಿನಿಮಾದ ಸನ್ನಿವೇಶಗಳು, ಅದನ್ನು ಗ್ಯಾನಿಯೇ ಭಕ್ತ–ಕನಕದಾಸನಾಗಿ ತೋರಿಸುತ್ತಿದ್ದ ಅಭಿನಯಗಳು ಎಲ್ಲವೂ ನೆನಪಾಗಿ ಸಿನಿಮಾ ನೋಡುವ ಹಂಬಲ ಎಲ್ಲರಲ್ಲೂ ಬಲವಾಗಿ ಬೆಳೆಯುತ್ತಾ ಹೋಯ್ತು.

ಹೀಗೆ ಗ್ಯಾನಿ ದೊಡ್ಡವನಾಗುತ್ತಾ ಬಂದಂತೆ ಖ್ಯಾತಿವಂತನಾಗುತ್ತಾ ಬರುಬರುತ್ತಾ ಮಹಾ ತರಲೆ, ಭಾರಿ ಬೋರು ಹೊಡೆಸುತ್ತಾನೆಂಬ ಹೆಸರುಗಳು ಬರತೊಡಗದವು. ಇಡೀ ಊರಲ್ಲಿ ಸಿಂಪಿಗರ ಮನೆ ಒಂದೇ ಇದ್ದದ್ದರಿಂದ ತುಕರಾಮಣ್ಣನಿಗೆ ಒಳ್ಳೆಯ ವ್ಯಾಪಾರವಿರುತ್ತಿತ್ತು. ಹಬ್ಬ ಹರಿದಿನಗಳಲ್ಲಂತೂ ತುರಿಸಿಕೊಳ್ಳಲು ಪುರಸೊತ್ತಿರುತ್ತಿರಲಿಲ್ಲ. ಆಗೆಲ್ಲಾ ಗ್ಯಾನಿ, ತುಳಜಕ್ಕರೂ ಸಹ ಕಾಚಾಗುಂಡಿ, ಕೈಹೊಲಿಗೆ ಮುಂತಾಗಿ ಮಾಡುತ್ತಾ ಸಹಕರಿಸುತ್ತಿದ್ದರು. ಗ್ಯಾನಿ ಮೊದಲು ಬರೀ ಗುಂಡಿ ಹಾಕುವುದನ್ನು ಮಾತ್ರ ಕಲಿತಿದ್ದ. ಯಾವಾಗ ಹೈಸ್ಕೂಲಲ್ಲಿ ಮೂರು ವರ್ಷ ಸತತವಾಗಿ ಫೇಲಾದ ನಂತರ ಲಂಗ, ಚಡ್ಡಿಗಳನ್ನು ಹೊಲೆಯುವುದನ್ನು ಕಲಿತು ಸ್ಕೂಲಿಗೆ ನಮಸ್ಕಾರ ಹೇಳಿದ್ದ. ಮಗನನ್ನು ದೊಡ್ಡ ಡಾಕ್ಟರನ್ನಾಗಿ ಮಾಡಬೇಕೆಂಬ ತುಕರಾಮಣ್ಣನ ಆಶೆ ಆಶೆಯಾಗಿಯೇ ಉಳಿದು ಮಗ ಮಾತ್ರ ಸತತ ಗಾಯಗಳಿಂದ ಡಾಕ್ಟರ ಬಳಿ ಅಲೆಯುವಂತಹ ಪರಿಸ್ಥಿತಿ ಒದಗಿತ್ತು.

ತುಕರಾಮಣ್ಣನ ಬಳಿಯಿದ್ದ ಸಿಂಗರ್ ಹೊಲಿಗೆ ಮಿಶನ್‌ನ ಜೊತೆ ಗ್ಯಾನಿಗೊಂದು ಉಷಾ ಮಿಶನ್ ಬಂದಿತು. ಕಟ್ಟೆಯ ಒಂದು ಬದಿಗೆ ಅಪ್ಪ ಇನ್ನೊಂದು ಬದಿಗೆ ಮಗ ಎದುರುಬದುರು ಕೂತು ಬಟ್ಟೆ ಹೊಲೆಯಲು ತೊಡಗಿದ್ದರು. ಮೊದಲ ಬಾರಿಗೆ ಗ್ಯಾನಿ ಬಟ್ಟೆ ಹೊಲೆದಾಗ ಆದ ಒಂದೇ ಒಂದು ಕೆಟ್ಟ ಘಟನೆ ಬಿಟ್ಟರೆ ಇದುವರೆಗೆ ಒಳ್ಳೆಯ ಟೈಲರ್ ಅನ್ನಿಸಿಕೊಂಡಿದ್ದಾನೆ. ಗೌಡ್ರ ನರಸಣ್ಣ ಹೆಂಡ್ತಿ ಮನೆಗೆ ಹೋಗಲೆಂದು ಹೊಲೆಯಲು ಹಾಕಿದ್ದ ದಾವಣಗೆರೆ ಕಾಟನ್‌ಮಿಲ್‌ನ ಬಟ್ಟೆಗೆ ಗ್ಯಾನಿ ಎರಡು ಜೋಬನ್ನಿಟ್ಟು ಅಂಗಿ ಮಾಡಿದ್ದ. ನರಸಣ್ಣ ಹೆಂಡ್ತಿ ಊರಿಗೆ ಹೋದಾಗ 'ಎರ್ಡು ಬಕಣದ ಅಳಿಯ, ಬಕಣಗಳು ಎಲ್ಲೆಲ್ಲಿ?' ಎಂದು ಚುಡಾಯಿಸಿದರಂತೆ. ಆ ಎರಡು ಜೋಬುಗಳು ಸರಿಸಮವಿರದೆ ಒಂದು ಸೊಂಟದ ಕೆಳಗೂ ಇನ್ನೊಂದು ಎದೆಯ ಮೇಲೂ ಇದ್ದುದರಿಂದ ನರಸಣ್ಣನಿಗೆ ಸಿಟ್ಟು ಬಂದು ಹೆಂಡ್ತಿ ಮನೆಯಿಂದ ಬಂದವನೇ ಗ್ಯಾನಿಯ ಕಪಾಳಕ್ಕೆ ಬಿಗಿದಿದ್ದ.

ಗ್ಯಾನಿಗೀಗ ಇಪ್ಪತ್ತೆರಡು ವರ್ಷಗಳಾಗುತ್ತಾ ಬಂದಿವೆ. ತುಕರಾಮಣ್ಣನ ಕಿವಿಗಳು ಸಂಪೂರ್ಣ ಹೇಗೆ ಕೇಳುವುದಿಲ್ಲವೋ ಹಾಗೆ ತುಳಜಕ್ಕನ ಕಣ್ಣುಗಳು ದೃಷ್ಟಿ ಕಳೆದುಕೊಂಡಿವೆ. ಗ್ಯಾನಿಯ ವಾರಿಗೆಯವರೆಲ್ಲಾ ಸಂಸಾರಿಗಳಾಗಿ ಕೈಲ್ಲೊಂದು ಬಗಲಲ್ಲೊಂದು ಹುಡುಗರನ್ನು ಹಿಡಿದುಕೊಂಡು ಓಡಾಡುತ್ತಿದ್ದಾರೆ. ಆದರೆ ಗ್ಯಾನಿಗೆ ಒಬ್ಬರೇ ಒಬ್ಬರೂ ಸಹ ಹೆಣ್ಣು